## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.174 ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ಸಮಿತಿ ಸಭೆಯ ನಡುವಳಿಗಳು

ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ/ಜಂಟಿ ಆಯುಕ್ತರು (ಮಹದೇವಪುರ) ರವರು ದಿನಾಂಕ: 24.03.2021 ರಂದು ಬೆಳಿಗ್ಗೆ 11:00 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.174 ಹೆಚ್.ಎಸ್.ಆರ್ ಕಛೇರಿಯಲ್ಲಿ ನಡೆಸಿದ್ದು, ಸಭೆಯ ನಡವಳಿ ಈ ಕೆಳಕಂಡಂತಿರುತ್ತದೆ.

ಉಪಸ್ಥಿತರು:

| ಹಾಜರಿದ್ದ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ, ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು | |
|---|---|
| 1. | ಶ್ರೀ ಆರ್. ವೆಂಕಟಚಾಲಪತಿ ಕ.ಆ.ಸೇ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ವಾರ್ಡ್.ನಂ.174 ಹೆಚ್.ಎಸ್.ಆರ್ ಬಡಾವಣೆ ಹಾಗೂ ಜಂಟಿ ಆಯುಕ್ತರು (ಮಹದೇವಪುರ) ವಲಯ |
| 2. | ಶ್ರೀ ಕೆ.ಎಸ್, ರಾಮೇಗೌಡ, ಕಾರ್ಯದರ್ಶಿ, ಸಹಾಯಕ ಅಭಿಯಂತರರು. ವಾರ್ಡ್.ನಂ.174 ಹೆಚ್.ಎಸ್.ಆರ್ ಬಡಾವಣೆ. |
| 3. | ಶ್ರೀ ಚಂದ್ರಶೇಖರ ಹೆಚ್.ಇ. ಆರ್.ಡಬ್ಲ್ಯೂ.ಎ/ ಸದಸ್ಯರು |
| 4. | ಶ್ರೀ ಬಿ.ಎನ್.ಆರ್ ರೆಡ್ಡಿ ಆರ್.ಡಬ್ಲ್ಯೂ.ಎ/ಸದಸ್ಯರು |
| 5. | ಶ್ರೀ ರಾಮಚಂದ್ರ, ಆರ್.ಡಬ್ಲ್ಯೂ.ಎ/ಸದಸ್ಯರು |
| 6. | ಶ್ರೀ ಬಿ.ಎಂ ರಮೇಶ್, ಆರ್.ಡಬ್ಲ್ಯೂ.ಎ/ಸದಸ್ಯರು |
| 7. | ಶ್ರೀಮತಿ ಡಾ॥ ಶಾಂತಿ, ಆರ್.ಡಬ್ಲ್ಯೂ.ಎ/ಸದಸ್ಯರು |
| 8. | ಶ್ರೀಮತಿ ಜಿ.ವಿಜಯ್‌ಲಕ್ಷ್ಮೀ ಆನಂದ, ಆರ್.ಡಬ್ಲ್ಯೂ.ಎ/ಸದಸ್ಯರು |
| 9. | ಶ್ರೀ ಶೇಷಾದ್ರಿ.ವೈ.ಎನ್ ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಲಯ |
| 10. | ಶ್ರೀ ಹನುಮಂತರಾಯ.ಟಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎಸ್.ಆರ್ ಉಪವಿಭಾಗ/ಬೃಹತ್ ನೀರುಗಾಲುವೆ |
| 11. | ಶ್ರೀಮತಿ ಲಕ್ಷ್ಮಿ.ಬಿ, ಸಹಾಯಕ ಕಂದಾಯ ಅಧಿಕಾರಿ ಹೆಚ್.ಎಸ್.ಆರ್ ಬಡಾವಣೆ |
| 12. | ಶ್ರೀ ಮುನಿರೆಡ್ಡಿ ಪೋಲಿಸ್ ಇನ್ಸಪೆಕ್ಟರ್ ಹೆಚ್.ಎಸ್.ಆರ್ ಪೋಲಿಸ್ ಠಾಣೆ |
| 13. | ಶ್ರೀ ಕೆ.ವಿ.ಅಂಬರೀಶ್. (ಪಿ.ಎಸ್.ಐ) ಸಂಚಾರಿ ಪೋಲಿಸ್ ಠಾಣೆ, ಇಬ್ಬಲೂರು |
| 14. | ಶ್ರೀ ನಾಗರಾಜ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿಡಬ್ಲ್ಯೂಎಸ್ಎಸ್‌ಬಿ) |
| 15. | ಶ್ರೀ ಸಾಯಿಬಣ್ಣ ಸಹಾಯಕ ಅಭಿಯಂತರರು (ಬಿಡಬ್ಲ್ಯೂಎಸ್ಎಸ್‌ಬಿ) |
| 16. | ಶ್ರೀ. ಹೆಚ್.ಇ. ಚಂದ್ರಶೇಖರ್, ತೋಟಗಾರಿಕೆ ಅಧಿಕ್ಷಕರು, ಬೊಮ್ಮನಹಳ್ಳಿ ವಲಯ |
| 17. | ಶ್ರೀ ವಿಕ್ರಾಂತ್ ಕೆ. ಸಹಾಯಕ ಅಭಿಯಂತರರು, ಬೃಹತ್ ನೀರುಗಾಲುವೆ, ಬೊಮ್ಮನಹಳ್ಳಿ ವಲಯ |
| 18. | ಶ್ರೀ ಯತೀಶ್, ಸಹಾಯಕ ಅಭಿಯಂತರರು, ಬೆಸ್ಕಾಂ ವಿಭಾಗ |
| 19. | ಶ್ರೀ ಮಹೇಶ್, ಅರಣ್ಯ ವಲಯ ಅಧಿಕಾರಿ, ಬೊಮ್ಮನಹಳ್ಳಿ ವಲಯ |
| 20. | ಶ್ರೀ ನರಸಪ್ಪ, ತೋಟಗಾರಿಕೆ ನೀರಿಕ್ಷಕರು, ಬೊಮ್ಮನಹಳ್ಳಿ ವಲಯ |
| 21. | ಶ್ರೀಮತಿ ಸತ್ಯವಾಣಿ, ಕಿ.ಆ.ಪ. ವಾರ್ಡ್ ಸಂ. 174 |
| 22. | ಶ್ರೀ ಮದನ್ ಬಿ.ಎಂ ಮಾರ್ಷಲ್, ವಾರ್ಡ್ ಸಂ. 174 |

ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ಹಾಗೂ ಹಾಜರಿದ್ದ ಸದ್ಯಸರುಗಳ ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಹಾಗೂ ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ ಮತ್ತು ಸಾರ್ವಜನಿಕರಿಗೆ ಸ್ವಾಗತ ಕೋರುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

Scanned with Car

| ಕ್ರ.ಸಂ | ಇಲಾಖೆ | ವಿಷಯ |
|---|---|---|
| 1 | ಬಿ.ಡಬ್ಲ್ಯೂ.ಎಸ್.ಎಸ್.ಬಿ | • ಹಿಂದಿನ ಸಭೆಯಲ್ಲಿ ಚರ್ಚಿಸಿರುವ ವಿಷಯದ ಬಗ್ಗೆ ಪ್ರಾಸ್ತಾಪಿಸಲಾಗಿದ್ದು, ಕುಡಿಯುವ ನೀರಿನ ವ್ಯವಸ್ಥೆಯನ್ನು 4 ದಿನಕ್ಕೆ ಒಂದು ಬಾರಿ ನೀಡಲು ಸಾಕಗುವಷ್ಟು ನೀರು ಪೂರೈಕೆ ಮಾಡಲಾಗುತ್ತಿದ್ದು, ಜನ ಸಂಖ್ಯೆ ಹೆಚ್ಚಾಗಿದ್ದು, ಹಾಗೂ ಬಡಾವಣೆ ಅಭಿವೃಧಿಯಾಗಿರುವುದರಿಂದ 3 ದಿನಕ್ಕೆ ಒಂದು ಬಾರಿ ಒದಗಿಸಲು ಹಿರಿಯ ಅಧಿಕಾರಿಗಳಿಗೆ ಅನುಮೋದನೆ ಪಡೆಯಲು ಕಡತವನ್ನು ಮಂಡಿಸಲಾಗುವುದೆಂದು ಸ.ಕಾ.ನಿ.ಅ ರವರು ತಿಳಿಸಿರುತ್ತಾರೆ. ಈ ಬಗ್ಗೆ ತ್ವರಿತವಾಗಿ ಕ್ರಮವಹಿಸುವಂತೆ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ಸೂಚಿಸಿರುತ್ತಾರೆ.<br>• ಹಿಂದಿನ ಸಭೆಯಲ್ಲಿ ಚರ್ಚಿಸಿರುವ ವಿಷಯಗಳನ್ನು ಪ್ರಸ್ತಾಪಿಸಲಾಗಿದ್ದು, ಇಬ್ಬಲೂರು ಗ್ರಾಮದಲ್ಲಿ ಒಳಚರಂಡಿಯಲ್ಲಿನ ಹೂಳನ್ನು Manual ತೆಗೆಸುವುದನ್ನು Machanical Machinery ಬಳಸಿ ಸ್ವಚ್ಛಗೊಳಿಸಲಾಗುತ್ತಿದ್ದೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿರುತ್ತಾರೆ<br>• ವಾರ್ಡ್ ವ್ಯಾಪ್ತಿಯಲ್ಲಿ ದ್ವಿ-ಚಕ್ರ ಮತ್ತು ನಾಲ್ಕು ಚಕ್ರವಾಹನಗಳನ್ನು ರಸ್ತೆಯಲ್ಲಿ ತೊಳೆಯುತ್ತಿದ್ದು ರಸ್ತೆಯ ಮೇಲೆ ನೀರು ಹರಿಯುತ್ತಿದ್ದು, ಡಾಂಬರೀಕರಣ ಹಾಳಾಗುತ್ತಿದ್ದು, ಸದರಿ ತೊಳೆದ ನೀರನ್ನು ಒಳಚರಂಡಿ ವ್ಯವಸ್ಥೆಗೆ ಅಳವಡಿಸಲು ಸದಸ್ಯರು ಕೋರಿರುತ್ತಾರೆ.<br>ಈ ಬಗ್ಗೆ ಅಧ್ಯಕ್ಷರು/ನೋಡಲ್ ಅಧಿಕಾರಿರವರುಅತಿ ಜರೂರಾಗಿ ಸ್ಥಳ ಪರಿಶೀಲಿಸಿ ಕ್ರಮ ವಹಿಸುವಂತೆ ಸೂಚಿಸಿರುತ್ತಾರೆ.<br>**ಕ್ರಮ: ಸ.ಕಾ.ಅ. ಮತ್ತು ಸ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ** |
| 2 | ಪಶುಪಾಲನ ಇಲಾಖೆ | ಇಂದಿನ ಸಭೆಗೆ ಪಶುಸಂಗೋಪನೆ ಇಲಾಖೆ ಅಧಿಕಾರಿರವರುಗೈರುಹಾಜರಾಗಿರುತ್ತಾರೆ. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳು ಹೆಚ್ಚಾಗುತ್ತಿದ್ದು, ನಾಯಿಗಳು ಮರಿಗಳನ್ನು ಹಾಕುತ್ತಿದ್ದು, ಮುಂದಿನ ದಿನಗಳಲ್ಲಿ ಹಿರಿಯ ನಾಗರೀಕರಿಗೆ, ಮಹಿಳೆಯರಿಗೆ, ಮಕ್ಕಳಿಗೆ ಕಚ್ಚುವ ಸಾಧ್ಯತೆಗಳಿರುತ್ತದೆ ಆದುದರಿಂದ ನಾಯಿಗಳಿಗೆ ಸಂತಾಹರಣ ಶಸ್ತ್ರ ಚಿಕಿತ್ಸೆ ಮಾಡಿಸಲು ಸದಸ್ಯರು ತಿಳಿಸಿರುತ್ತಾರೆ. ಈ ಬಗ್ಗೆ ಅಧ್ಯಕ್ಷರು/ನೋಡಲ್ ಅಧಿಕಾರಿರವರುಕ್ರಮ ವಹಿಸುವಂತೆ ಸೂಚಿಸಿರುತ್ತಾರೆ.<br>**ಕ್ರಮ: ಪಶುಸಂಗೋಪನೆ ಅಧಿಕಾರಿರವರು** |
| 3 | ವಿದ್ಯುತ್ ವಿಭಾಗ | • ವಾರ್ಡ್ ವ್ಯಾಪ್ತಿಯಲ್ಲಿ ಬೀದಿದೀಪಗಳಿಗೆ ಕಂಬಗಳಲ್ಲಿ ವೈರ್‌ಗಳನ್ನು ಹಾಗೆ ಬಿಟ್ಟಿದ್ದು, ಟೈಮರ್‌ಗಳಿಗೆ ಟೈಮರ್ ಸ್ವಿಚ್ ಅಳವಡಿಸಲು ಮತ್ತು ಜಾತ್ರೆ ಇರುವುದರಿಂದ ಹೊಸದಾಗಿ ಬೀದಿ ದೀಪ ಅಳಡಿಸಲು ಸದಸ್ಯರು ಕೋರಿರುತ್ತಾರೆ.<br>ಈ ಬಗ್ಗೆ ಅಧ್ಯಕ್ಷರು/ನೋಡಲ್ ಅಧಿಕಾರಿರವರುಕ್ರಮ ವಹಿಸುವಂತೆ ಸೂಚಿಸಿರುತ್ತಾರೆ.<br>**ಕ್ರಮ : ಸಹಾಯಕ ಅಭಿಯಂತರರು, ವಿದ್ಯುತ್ ವಿಭಾಗ** |
| 4 | ತೋಟಗಾರಿಕೆ | ವಾರ್ಡ್ ವ್ಯಾಪ್ತಿಯಲ್ಲಿರುವ ಮಕ್ಕಳ ಆಟದ ಮೈದಾನದಲ್ಲಿ ಆಟದ ಸಾಮಾಗ್ರಿಗಳನ್ನು ಅಳವಡಿಸಲು ವಾರ್ಡ್ ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ, ವಿದ್ಯುತ್ ವಿಭಾಗ, ಯೋಜನೆ ವಿಭಾಗ ರವರ ಸಹಾಕರದೊಂದಿಗೆ ಉದ್ಯಾನವಗಳ ನಿರ್ವಹಣೆ ಮಾಡಲಾಗುತ್ತಿದ್ದು, ಹಾಗೂ ಎಲ್ಲಾ ಸೆಕ್ಟರ್‌ವಾರುಗಳಲ್ಲಿ ಈಗಾಗಲೇ ಗುತ್ತಿಗೆದಾರರಿಗೆ ಕಾರ್ಯದೇಶ ನೀಡಲಾಗಿದೆ, ಕೆಲವು ಉದ್ಯಾನವನಗಳಲ್ಲಿ ಆಟದ ಸಾಮಾಗ್ರಿಗಳು ಜಿಮ್ ಸಾಮಾಗ್ರಿಗಳು ಅಳವಡಿಸಲಾಗಿದೆ ಎಂದು ತೋಟಗಾರಿಕೆ ಅಧೀಕ್ಷಕರು ಸಭೆಯಲ್ಲಿ ತಿಳಿಸಿರುತ್ತಾರೆ. |

| | | |
|---|---|---|
| | | • ವಾರ್ಡ್ ವ್ಯಾಪ್ತಿಯ 3ನೇ ಸೆಕ್ಟರ್‌ನ ಟ್ವಿನ್ ಪಾರ್ಕ್‌ನಲ್ಲಿ ಹಿರಿಯ ನಾಗರೀಕರಿಗೆ ಓಡಾಡಲು ಪಾದಚಾರಿ ಮಾರ್ಗ ವ್ಯವಸ್ಥೆ ಕಲ್ಪಿಸಲು ಹಾಗೂ ಬೆಂಚ್ ಅಳವಡಿಸಲು ಮತ್ತು ಇತ್ಯಾದಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸದಸ್ಯರು ಕೋರಿರುತ್ತಾರೆ.<br>ಈ ಬಗ್ಗೆ ಟೆಂಡರ್ ಕರೆದ್ದು, ಕಾರ್ಯದೇಶ ನೀಡುವಂತೆ ಅಧ್ಯಕರು/ನೋಡಲ್ ಅಧಿಕಾರಿರವರುಸೂಚಿಸಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯ ಉದ್ಯಾನವನಗಳಲ್ಲಿ ಟೆಂಡರ್ ಕರೆದಿದ್ದು, ಬೋರೆವೆಲ್ ಕೊರೆಯುತ್ತಿದ್ದು, ಒಂದು ವೇಳೆ ಬೊರೆವೆಲ್‌ನಲ್ಲಿ ನೀರು ಬಾರದಿದ್ದ ಪಕ್ಷದಲ್ಲಿ ಆ ಕಾಮುಗಾರಿಗೆ ಬಿಲ್ ಪಾವತಿಯಾಗದಂತೆ ನೋಡಿಕೊಳ್ಳಲು ವಾರ್ಡ್ ಸದಸ್ಯರು ಕೋರಿರುತ್ತಾರೆ.<br>ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕರು/ನೋಡಲ್ ಅಧಿಕಾರಿರವರುಸೂಚಿಸಿರುತ್ತಾರೆ.<br>**ಕ್ರಮ : ತೋಟಗಾರಿಕೆ ಅಧ್ಯಕ್ಷರು** |
| 5 | ಬೆಸ್ಕಾಂ | ವಾರ್ಡ್ ವ್ಯಾಪ್ತ್ಯಯಲ್ಲಿ ಮೊಬೈಲ್ ಟವರ್‌ವನ್ನು ಅನಧಿಕೃತವಾಗಿ ಅಳವಡಿಸಿರುವುದನ್ನು ತೆರವುಗೊಳಿಸಲು ಈಗಾಗಲೇ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿದ್ದು, ಈ ಬಗ್ಗೆ ಕೇಂದ್ರ ಸರ್ಕಾರದ ಅನುಮತಿ/ ನಿರ್ದೇಶನ ಇರುವುದರಿಂದ ಅಧೀಕ್ಷಕ ಅಭಿಯಂತರರು ರವರೊಂದಿಗೆ ಚರ್ಚಿಸಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿ ಮೊಬೈಲ್ ಟವರ್‌ನ್ನು ತೆರವುಗೊಳಿಸಲು ಕ್ರಮ ವಹಿಸಲಾಗುವುದೆಂದು ಬೆಸ್ಕಾಂ ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ. ಈ ಬಗ್ಗೆ ಅತಿ ಜರೂರಾಗಿ ಕ್ರಮ ವಹಿಸುವಂತೆ ಅಧ್ಯಕರು/ನೋಡಲ್ ಅಧಿಕಾರಿರವರುಸೂಚಿಸಿರುತ್ತಾರೆ.<br>**ಕ್ರಮ: ಸಹಾಯಕ ಅಭಿಯಂತರರು, ಬೆಸ್ಕಾಂ** |
| 6 | ಕಂದಾಯ | ವಾರ್ಡ್ ವ್ಯಾಪ್ತಿಯಲ್ಲಿ 2020-21ನೇ ಸಾಲಿನ ಹಣಕಾಸಿನ ವರ್ಷ ಕೊನೆಯಾಗುವುದರಿಂದ ಕಂದಾಯ ಬಾಕಿ ಉಳಿಸಿಕೊಂಡಿರುವವರಿಂದ ನೋಟಿಸ್ ಜಾರಿ ಮಾಡಿ ವಸೂಲಾತಿ ಮಾಡುವಂತೆ ಸದಸ್ಯರು ಕೋರಿರುತ್ತಾರೆ.<br>ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕರು/ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.<br>**ಕ್ರಮ: ಸಹಾಯಕ ಕಂದಾಯ ಅಧಿಕಾರಿರವರು**<br>**(ಹೆಚ್.ಎಸ್.ಆರ್ ಉಪವಿಭಾಗ)** |
| 7 | ಕಾಮಗಾರಿ | ವಾರ್ಡ್ ವ್ಯಾಪ್ತಿಯಲ್ಲಿ ಗೈಲ್ ಗ್ಯಾಸ್ ಸಂಸ್ಥೆ ರವರು ರಸ್ತೆಯನ್ನು ಅಗೆಯುತ್ತಿದ್ದು, ಈ ಬಗ್ಗೆ State Principal General Secretary ರವರ ನಿರ್ದೇಶನದಂತೆ ಆಕ್ಷೇಪಣೆ ಮಾಡದಂತೆ ನಿರ್ದೇಶನವಿದೆ ಎಂದು ಸಹಾಯಕ ಅಭಿಯಂತರರು ರವರು ತಿಳಿಸಿರುತ್ತಾರೆ.<br>ಈ ಬಗ್ಗೆ ಮುಂದಿನ ಸಭೆಯಲ್ಲಿ ನಿರ್ದೇಶನ ಪತ್ರವನ್ನು ನೀಡುವುದಾಗಿ ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯ ಉದ್ಯಾನವನಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಲು ಸದಸ್ಯರು ಕೋರಿರುತ್ತಾರೆ.<br>ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕರು/ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.<br>• ಪಾದಚಾರಿ ಮಾರ್ಗವನ್ನು ತೆರವುಗೊಳಿಸಲು ಕಾರ್ಯಕ್ರಮವನ್ನು ಪೋಲಿಸ್ ಇಲಾಖೆ ಸಹಕಾರದೊಂದಿಗೆ ದಿನಾಂಕ: 29.03.2021 ರಂದು ಹಮ್ಮಿಕೊಳ್ಳಲು ವಾರ್ಡ್ ಸಭೆಯಲ್ಲಿ ತೀರ್ಮಾನಿಸಲಾಯಿತು.<br>• 2020-21ನೇ ಸಾಲಿನ ಒಂಟಿ ಮನೆ ಯೋಜನೆಯಡಿಯಲ್ಲಿ ಅರ್ಜಿ ಸಲ್ಲಿಸಿರುವ ಅರ್ಹ ಫಲಾನುಭವಿಗಳಿಗೆ ಕಾಮಗಾರಿ |

Scanned with Ca

| | | |
|---|---|---|
| | | ಸಂಕೇತ ಕಾರ್ಯದೇಶ ನೀಡಲು ಕಾರ್ಯಪಾಲಕ ಅಭಿಯಂತರರು, ರವರಿಗೆ ಸೂಚಿಸುತ್ತಾ ಈ ಬಗ್ಗೆ ಜಂಟಿ ಆಯುಕ್ತರು ಬೊಮ್ಮನಹಳ್ಳಿ ವಲಯ ರವರಿಂದ ಅನುಮೋದನೆ ಪಡೆಯಲು ಕ್ರಮ ವಹಿಸುವುದಾಗಿ ಸೂಚಿಸಿದರು.<br>**ಕ್ರಮ: ಸಹಾಯಕ ಅಭಿಯಂತರರು.** |
| 8 | **ಪೋಲಿಸ್ ಇಲಾಖೆ** | ಹಿಂದಿನ ಸಭೆಯಲ್ಲಿ ಚರ್ಚಿಸಿರುವ ವಿಷಯಗಳನ್ನು ಪ್ರಸ್ತಾಪಿಸಲಾಗಿ, ವಾರ್ಡ್ ವ್ಯಾಪ್ತಿಯಲ್ಲಿ ಚೈನ್ ಸ್ನಾಚಿಂಗ್/ಮೊಬೈಲ್ ಸ್ನಾಚಿಂಗ್ ಪೆಟ್ರೋಲಿಂಗ್ ಮಾಡಲಾಗುತ್ತಿದ್ದು, ಚೈನ್ ಸ್ನಾಚಿಂಗ್ ಪ್ರಕರಣವು ಕಡಿಮೆಯಾಗಿದ್ದು, ಮೊಬೈಲ್ ಸ್ನಾಚಿಂಗ್ ಪತ್ತೆ ಕಾರ್ಯ ಮಾಡಲಾಗುತ್ತಿದೆಂದು ಪೋಲಿಸ್ ಇನ್ಸ್‌ಪೆಕ್ಟರ್ ರವರು ತಿಳಿಸಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ಸಿಗರೆಟ್ ಸೇವನೆ ಮತ್ತು ಶಾಲಾ ಕಾಲೇಜ್ ಆವರಣದಲ್ಲಿ ತಂಬಾಕು ಮಾರಾಟ ಮೂಲಕ ಕೋಟ್ಪ ಕಾಯ್ದೆ ಉಲ್ಲಂಘನೆ ಮಾಡಿದವರಿಗೆ ದಂಡ ವಿಧಿಸುವಂತೆ ಸದಸ್ಯರು ಕೋರಿರುತ್ತಾರೆ.<br>ಈ ಕೆಳಕಂಡ ಸ್ಥಳಗಳಲ್ಲಿ<br>1. 19ನೇ ಅಡ್ಡ ರಸ್ತೆ<br>2. 27ನೇ ಮುಖ್ಯ ರಸ್ತೆ, ಜಂಕ್ಷನ್<br>3. ಕೆಫ್. ಕಾಫೀ ಹತ್ತಿರ<br>4. ಮುಗಲ್ ಟ್ರಿಟ್ ಹತ್ತಿರ,<br>5. ನಂದಿನಿ ಕೂಲ್ ಜಾಯಿಂಟ್ ಹತ್ತಿರ,<br>6. ಕೆ.ಎಲ್.ಎಂ ಮಾಲ್ ಹತ್ತಿರ<br>7. ಫಿಶ್ ಅಂಡ್ ಕರಿ ರೆಸ್ಟೋರೆಂಟ್ ಹತ್ತಿರ<br>8. ಇತ್ಯಾದಿ ಸ್ಥಳಗಳಲ್ಲಿ<br>**ಕ್ರಮ: ಪೋಲಿಸ್ ಇನ್ಸ್‌ಪೆಕ್ಟರ್ ಹೆಚ್.ಎಸ್.ಆರ್ ಪೋಲಿಸ್ ಠಾಣೆ** |

ಅಂತಿಮವಾಗಿ ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ರವರು, ವಾರ್ಡ್ ನಂ. 174 ಹಾಗೂ ಜಂಟಿ ಆಯುಕ್ತರು (ಮಹಾದೇವಪುರ) ವಲಯ ರವರು ಸಭೆಯಲ್ಲಿ ಚರ್ಚಿಸಲಾದ ಎಲ್ಲಾ ವಿಷಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿರವರುತುರ್ತು ಕ್ರಮವಹಿಸಲು ಸೂಚಿಸಿದರು ಹಾಗೂ ಸಾರ್ವಜನಿಕರು ನೀಡಿರುವ ದೂರಿನ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

24/03/2021

ಕಾರ್ಯದರ್ಶಿ
ಸಹಾಯಕ ಅಭಿಯಂತರು
ಹೆಚ್.ಎಸ್.ಆರ್.ಬಡಾವಣೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ ವಾರ್ಡ್ ನಂ.174
ಹೆಚ್.ಎಸ್.ಆರ್.ಬಡಾವಣೆ ಹಾಗೂ
ಜಂಟಿ ಆಯುಕ್ತರು ಮಹದೇವಪುರ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with Car